ದಿನಾಂಕಃ **12.01.2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**.**

ಪಾಟೀ ಸವಾಲುಃ ಶ್ರೀ ಎಸ್ ಸಿ ಎನ್ ವಕೀಲರಿಂದಃ-

ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ನನ್ನ ಅಜ್ಜನ ಕಾಲದಿಂದಲೂ ಪಂಚನಹಳ್ಳಿಯಲ್ಲಿ ವಾಸವಾಗಿರುತ್ತೇನೆ. ಮೃತ ಪಿ ಯು ವಿಶ್ವನಾಥ ಅವರೂ ಸಹ ಪಂಚನಹಳ್ಳಿಯಲ್ಲಿ ವಾಸವಾಗಿದ್ದರು. ಸದರಿ ಪಿ ಯು ವಿಶ್ವನಾಥ ರವರು ದಿಃ 30.03.2021 ರಂದು ಹೃದಯಾಘಾತದಿಂದ ಮರಣ ಹೊಂದಿರುತ್ತಾರೆ ಎಂದರೆ ಸರಿ. ಅವರು ಮರಣ ಹೊಂದುವ ಸಮಯಕ್ಕೆ ಪಂಚನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಸದಸ್ಯರಾಗಿದ್ದರು. ಸದರಿಯವರು ವಿದ್ಯಾವಂತರಾಗಿದ್ದರು ಎಂದರೆ ಸರಿ. ಈ ದಾವೆಯ ವ್ಯವಹಾರ ಹೊರತುಪಡಿಸಿ ನನ್ನ ಮತ್ತು ಅವರ ನಡುವೆ ಬೇರೆ ಯಾವುದೇ ವ್ಯವಹಾರ ಆಗಿರುವುದಿಲ್ಲ. ನಾನು ನನ್ನ ವಕೀಲರು ಕಳುಹಿಸಿರುವ ಕಾನೂನು ತಿಳುವಳಿಕೆ ಪತ್ರಕ್ಕೆ ನಾನು ಮಾಹಿತಿ ನೀಡಿರುತ್ತೇನೆ. ಪಿ ಯು ವಿಶ್ವನಾಥ ರವರು ನನ್ನ ಬಳಿ ದಿಃ 20.01.2021 ರಂದು ಹಣವನ್ನು ಕೇಳಿರುತ್ತಾರೆ. ಬೆಳಗ್ಗೆ 10.00 ಗಂಟೆಗೆ ನನ್ನ ಮನೆಗೆ ಬಂದು ಕೇಳಿರುತ್ತಾರೆ. ಪಿ ಯು ವಿಶ್ವನಾಥ ರವರು ಅವರ ಸ್ನೇಹಿತ ಪಿ ಎಂ ಉಮಾಪತಿಯೊಂದಿಗೆ ನನ್ನ ಮನೆಗೆ ಬಂದಿದ್ದರು.

ಪಿ ಎಂ ಉಮಾಪತಿ ಯವರು ಪಂಚನಹಳ್ಳಿ ಗ್ರಾಮಸ್ಥರು. ಪಿ ಯು ವಿಶ್ವನಾಥ ರವರಿಗೆ ಅದೇ ದಿನ 11.00 ಗಂಟೆಗೆ ಹಣ ನೀಡಿರುತ್ತೇನೆ. ಹಣವನ್ನು ನಾನು ನಗದಾಗಿ ನೀಡಿರುತ್ತೇನೆ. ರೂ. 20,000 ಕ್ಕಿಂತ ಹೆಚ್ಚಿನ ಹಣವನ್ನು ನಗದಾಗಿ ನೀಡಬಾರದು ಎಂಬ ನಿಯಮ ನನಗೆ ಗೊತ್ತಿಲ್ಲ. ಅವರು ನನ್ನ ಬಳಿ ಗೃಹ ಪ್ರವೇಶದ ಸಲುವಾಗಿ ಸಾಲವನ್ನು ಕೇಳಿರುತ್ತಾರೆ. ಹಣವನ್ನು ನನ್ನ ಮನೆಯಲ್ಲಿ ನೀಡಿರುತ್ತೇನೆ. ಹಣವನ್ನು ನೀಡುವ ಸಮಯಕ್ಕೆ ಪಿ ಯು ವಿಶ್ವನಾಥ, ಉಮಾಪತಿ ಮತ್ತು ನನ್ನ ತಾಯಿ ಇದ್ದರು. ನಾನು ರೂ. 500 ಮುಖ ಬೆಲೆಯ ಹಣವನ್ನು ನೀಡಿರುತ್ತೇನೆ. ರೂ. 500 ರ 328 ನೋಟುಗಳನ್ನು ನೀಡಿರುತ್ತೇನೆ. ಹಣವನ್ನು ಒಂದು ಎರಡು ತಿಂಗಳ ಒಳಗೆ ಹಿಂದಿರುಗಿಸುವುದಾಗಿ ಹೇಳಿರುತ್ತಾರೆ. ಸದರಿ ಹಣದ ಮರುಪಾವತಿಗಾಗಿ ಪಂಚನಹಳ್ಳಿಯ ಕೆನರಾ ಬ್ಯಾಂಕಿನ ಚೆಕ್ಕನ್ನು ಭದ್ರತೆಗಾಗಿ ನೀಡಿರುತ್ತಾರೆ. ಸದರಿ ಚೆಕ್ಕನ್ನು ವಿಶ್ವನಾಥ ರವರೇ ಬರೆದಿರುತ್ತಾರೆ. ನಿಪಿ-1 ರ ಚೆಕ್ಕಿನಲ್ಲಿ ಇರುವ ಸಹಿ ಮತ್ತು ಒಕ್ಕಣೆಯ ಶಾಯಿಗೂ ವ್ಯತ್ಯಾಸ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪಿ ಯು ವಿಶ್ವನಾಥ ರವರು ನೀಲಿ ಬಣ್ಣದ ಶಾಯಿಯ ಪೆನ್ನಿನಲ್ಲಿ ಒಕ್ಕಣೆ ಬರೆದು ಕಪ್ಪು ಬಣ್ಣದ ಶಾಯಿಯ ಪೆನ್ನಿನಲ್ಲಿ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ರ ಚಕ್ಕಿನ ಒಕ್ಕಣೆ ಮತ್ತು ಸಹಿಯನ್ನು ಪಿ ಯು ವಿಶ್ವನಾಥ ರವರು ಮಾಡಿರುತ್ತಾರೆ. ನಿಪಿ-1 ರ ಚಕ್ಕು ಕೆನರಾ ಬ್ಯಾಂಕ್ ಪಂಚನಹಳ್ಳಿಗೆ ಸೇರಿದ ಚಕ್ಕು ಎಂದರೆ ಸರಿ. ನಿಪಿ-1 ರ ಚಕ್ಕಿನಲ್ಲಿರುವ ಸಹಿಯು ಪಿ ಯು ವಿಶ್ವನಾಥ ರವರದ್ದೋ ಅಥವಾ ಅಲ್ಲವೇ ಎಂದು ನಾನು ಬ್ಯಾಂಕಿನಿಂದ ಪರಿಶೀಲಿಸಿರುವುದಿಲ್ಲ. ನಿಪಿ-1 ರ ಚಕ್ಕು ಯಾರ ಖಾತೆಯ ಚಕ್ಕು ಎಂದು ತಿಳಿದುಕೊಂಡಿರುತ್ತೇನೆ.

ನಿಪಿ-1 ರಲ್ಲಿರುವ ಸಹಿ ಯಾರ ಸಹಿ ಎಂದು ನೀವು ತಿಳಿದುಕೊಂಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಪಿ ಯು ವಿಶ್ವನಾಥ ರವರು ನನ್ನ ಸಮಕ್ಷಮದಲ್ಲಿ ನಿಪಿ-1 ಕ್ಕೆ ಸಹಿ ಮಾಡಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪಿ ಯು ವಿಶ್ವನಾಥ ರವರು ಎರಡು ತಿಂಗಳ ನಂತರ ಹಣ ಪಾವತಿ ಮಾಡದೇ ಇದ್ದಾಗ ನಾನು ಅವರಿಗೆ ನೋಟಿಸು ಜಾರಿ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ಆತನ ಬಳಿ ಕೇಳಿದ್ದು ಆತ ಹಣವನ್ನು ಕೊಡುತ್ತೇನೆ ಎಂದು ಹೇಳಿರುತ್ತಾನೆ ಎಂದು ನುಡಿಯುತ್ತಾರೆ. ಈ ವಿಚಾರವನ್ನು ನನ್ನ ಕಾನೂನು ತಿಳುವಳಿಕೆ ಪತ್ರದಲ್ಲಿ ಹೇಳಿರುತ್ತೇನೆ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.